ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5, Special Issue-1, Sep-Oct, 2023, Pp. 17-21.**
**©IIMRD, Mysuru.**
**www.iimrd.com**

# ಡಾ. ಕೆ.ಎನ್.ಗಣೇಶಯ್ಯ ಅವರ 'ಶಿಲಾಕುಲ ವಲಸೆ'–ಕಾದಂಬರಿಯ ಅವಲೋಕನ

**ಡಾ.ಗುರುಸ್ವಾಮಿ ಹಿರೇಮಠ***

*ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ನವನಗರ, ಬಾಗಲಕೋಟೆ.

***ಸಾರಾಂಶ: (Abstract)***

ವೃತ್ತಿಯಿಂದ ಕೃಷಿ ವಿಜ್ಞಾನಿ ಆಗಿರುವ ಕೆ.ಎನ್. ಗಣೇಶಯ್ಯ ಅವರು ಮೂಲತಃ ಕೋಲಾರ ಜಿಲ್ಲೆಯವರು. ಕಳೆದ 30 ವರ್ಷಗಳಿಂದ ತಳಿ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವ ಅವರು ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು. ಪ್ರಾಣಿ ಮತ್ತು ಸಸ್ಯಗಳ ವರ್ತನೆಗೆ ಮೂಲಭೂತವಾದ ಜೀವ ವಿಕಾಸದ ತತ್ವಗಳನ್ನು ಅನ್ವೇಷಿಸುವುದು ಇವರ ಮತ್ತೊಂದು ಸಂಶೋಧನಾಸಕ್ತಿ. ಭಾರತದ ಪ್ರಮುಖ ಜೀವ ವೈವಿಧ್ಯ ತಾಣಗಳಲ್ಲಿನ ಸಸ್ಯಗಳ ಮತ್ತು ದೇಶದ ಜೀವ ಸಂಪತ್ತಿನ ಬಗ್ಗೆ ಇವರು ತಯಾರಿಸಿರುವ ಮಾಹಿತಿಯ ಖಜಾನೆಯ ಸಿ.ಡಿ.ಗಳು ಮತ್ತು ಅಂತರ್ಜಾಲ ಒಂದು ಅಪೂರ್ವ ಹೆಜ್ಜೆ. ಇನ್ನೂರಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧ ಬರೆದಿರುವ ಅವರು ಆರು ವೈಜ್ಞಾನಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. 'ಶಾಲಭಂಜಿಕೆ' ಸಣ್ಣಕತೆ ಮೊದಲ ಸೃಜನಶೀಲ ಬರವಣಿಗೆ. ಅದೇ ಹೆಸರಿನ ಸಂಕಲನವೂ ಪ್ರಕಟವಾಗಿದೆ. ವಿವಿಧ ಪತ್ರಿಕೆಗಳಲ್ಲಿ ಹಲವಾರು ಕತೆಗಳು ಪ್ರಕಟವಾಗಿವೆ. 'ಕನಕ ಮುಸುಕು', 'ಕರಿಸಿರಿಯಾನ', 'ಕಪಿಲಿಪಿಸಾರ', 'ಚಿತಾದಂತ', 'ಏಳು ರೊಟ್ಟಿಗಳು', 'ಮೂಕಧಾತು', 'ಶಿಲಾಕುಲ ವಲಸೆ' ಕಾದಂಬರಿಗಳು. ಪ್ರಸ್ತುತ ಲೇಖನದಲ್ಲಿ ಶಿಲಾಕುಲವಲಸೆ ಕಾದಂಬರಿಯನ್ನು ಅವಲೋಕಿಸಲಾಗಿದೆ.

***ಮುಖ್ಯಪದಗಳು (Keywords)*** ಶಿಲಾಕುಲ, ಕಾದಂಬರಿ, ಅವಲೋಕನ, ವಲಸೆ, ಚರಿತ್ರೆ, ವೇದಕಾಲ.

**ಪೀಠಿಕೆ**

ಕನ್ನಡ ಸಾಹಿತ್ಯಲೋಕ ತನ್ಮೂಲಕ ಕಲೆ, ವಿಜ್ಞಾನ, ತಂತ್ರಜ್ಞಾನ, ಸಂಸ್ಕೃತಿ, ಸಾಮಾಜಿಕತೆ, ಧಾರ್ಮಿಕತೆ, ಶಿಕ್ಷಣ, ತಾಂತ್ರಿಕತೆ, ಪರಿಸರ ಮತ್ತು ಇತಿಹಾಸವನ್ನು; ಹೀಗೆ ಮಾನವ ಬದುಕಿನ ಬಹು–ಆಯಾಮಗಳನ್ನು ರೂಪಿಸಿಕೊಳ್ಳುತ್ತಾ ಆತನ ಸಮಗ್ರ ಬದುಕಿನ ವಿಚಾರ–ಧಾರೆಗಳನ್ನು ಕಟ್ಟಿಕೊಡುತ್ತಿದೆ. ಇಂತಹ ಕನ್ನಡ ಸಾಹಿತ್ಯಲೋಕಕ್ಕೆ ಚರಿತ್ರಾರ್ಹ ಕೊಡುಗೆ ನೀಡುತ್ತಿರುವ ಡಾ. ಕೆ.ಎನ್.ಗಣೇಶಯ್ಯನವರು ಕನ್ನಡದ ಪ್ರಮುಖ ಮತ್ತು ವಿಶಿಷ್ಟ ಚಿಂತಕರು ಹಾಗೂ ಬರಹಗಾರರು. ಒಬ್ಬ ಕೃಷಿ ವಿಜ್ಞಾನಿಯಾಗಿಯೂ ಚರಿತ್ರೆಯ ಬಗೆಗಿನ ಕಥೆಗಳನ್ನು ಆಧರಿಸಿ ಕಾದಂಬರಿಗಳನ್ನು ತಮ್ಮದೇಯಾದ ವಿಭಿನ್ನ ಶೈಲಿಯಲ್ಲಿ ಬರೆಯುವ ಮೂಲಕ ಒಂದು ಹೊಸ ಬಗೆಯ ಸಾಹಿತ್ಯವನ್ನು ಪರಿಚಯಿಸಿ ಓದುಗರ ಗಮನ ಮತ್ತು ಮನವನ್ನು ಸೆಳೆದು ಪ್ರಸಿದ್ಧರಾದವರು. *(ನೋಡಿ–ಕೆ.ಎನ್.ಗಣೇಶಯ್ಯ ವಿಕಿಪಿಡಿಯಾ).*

*Please cite this article as:* ಡಾ.ಗುರುಸ್ವಾಮಿ ಹಿರೇಮಠ (2023). ಡಾ. ಕೆ.ಎನ್.ಗಣೇಶಯ್ಯ ಅವರ 'ಶಿಲಾಕುಲ ವಲಸೆ'–ಕಾದಂಬರಿಯ ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(1). ಪು.ಸಂ. 17–21.*

ಡಾ. ಕೆ.ಎನ್.ಗಣೇಶಯ್ಯ ಇವರು ಇತಿಹಾಸದ ಆ ಕಾಲಘಟ್ಟದ ಸಂದಿಗ್ಧತೆಗಳನ್ನು ಮತ್ತು ಘಟಿಸಿದ ಎಲ್ಲ ಘಟನೆಗಳನ್ನು ಯಥಾವತ್ತಾಗಿ ಉಳಿಸಿಕೊಳ್ಳಲಾಗದ ಸನ್ನಿವೇಶಗಳನ್ನು ಒಬ್ಬ ಕಾದಂಬರಿಕಾರರಾಗಿ ಅನುಭವಿಸಿದರೂ ಕನ್ನಡದ ಐತಿಹಾಸಿಕ ಕಾದಂಬರಿಗಳನ್ನು ರಚಿಸಿದವರಲ್ಲಿ ಇವರಿಗೆ ವಿಶಿಷ್ಟ ಸ್ಥಾನವಿದೆ. ಕನಕ ಮುಸುಕು, ಕರಿಸಿರಿಯಾನ, ಕಪಿಲಿಪಿಸಾರ, ಚಿತಾದಂತ, ಏಳು ರೊಟ್ಟಿಗಳು, ಮೂಕ ಧಾತು, ಶಿಲಾಕುಲ ವಲಸೆ, ಬಳ್ಳಿಕಾಳ ಬೆಳ್ಳಿ, ರಕ್ತಸಿಕ್ತ ರತ್ನ ಈ ಪ್ರಮುಖ ಕಾದಂಬರಿಗಳ ಮೂಲಕ ಸಾರಸ್ವತ ಲೋಕಕ್ಕೆ ಮಾದರಿಯಾದವರು.

ತಮ್ಮ ಕಾದಂಬರಿಗಳಲ್ಲಿ ಅನೇಕ ವಾಸ್ತವಿಕ, ಚಾರಿತ್ರಿಕ ಘಟನೆಗಳನ್ನು ಆಧರಿಸಿದರೂ ಸಮಯೋಚಿತ ಕಲ್ಪನೆ, ಕುತೂಹಲ ಬೆರೆಸಿದ ಸರಳ ಭಾಷೆ, ಚರಿತ್ರೆ, ವಿಜ್ಞಾನ, ಜೀವವೈವಿಧ್ಯತೆ ಮತ್ತು ಪರಿಸರದಲ್ಲಿನ ವಿಸ್ಮಯಗಳ ಲೋಕಗಳು ಒಟ್ಟು ಬರಹಗಳಲ್ಲಿ ಪ್ರಮುಖವಾದ ಅಂಶಗಳಾಗಿವೆ. ಪ್ರಸ್ತುತ ಲೇಖನದ ಮೂಲಕ ಅವರ **'ಶಿಲಾಕುಲ ವಲಸೆ'** ಎಂಬ ಕೃತಿಯೊಳಗಿನ ಚಾರಿತ್ರಿಕ ಮತ್ತು ಸಾಹಿತ್ಯಿಕ ಸಂಗತಿಗಳ ಹೊಸ ನೋಟಗಳನ್ನು ಅವಲೋಕಿಸುವ ಪ್ರಯತ್ನ ಇದಾಗಿದೆ.

ಮಾನವ ಚರಿತ್ರೆಯೊಳಗಿನ ಕುತೂಹಲಕಾರಿಯಾದ ವಿವರಗಳನ್ನು, ಇಲ್ಲಿಯವರೆಗೆ ಆತ ಬದುಕಿ ಬಾಳಿದ್ದು ಹೇಗೆ? ಇದಕ್ಕಾಗಿ ರೂಪಿಸಿದ, ಈಗಲೂ ರೂಪಿಸುತ್ತಿರುವ ತಂತ್ರ–ಷಡ್ಯಂತ್ರಗಳು, ತನ್ನ ಅಸ್ಮಿತೆಗಾಗಿ ಕೈಗೊಂಡ ದಂಡಯಾತ್ರೆಗಳು, ಯಶಸ್ವಿಯಾದ ಕಾರ್ಯತಂತ್ರಗಳು ಅದರಿಂದಾದ ಅದ್ಭುತ ಕಾರ್ಯಗಳು ಒಟ್ಟುಗೊಂಡ ರಚನೆ ಇಲ್ಲಿನ ಅದಮ್ಯ ಹಂಬಲದ ಪ್ರತೀಕವಾಗಿ ವ್ಯಕ್ತವಾಗಿದೆ. ಆದಾಗ್ಯೂ ಐತಿಹಾಸಿಕ ಕಾದಂಬರಿಗಳಲ್ಲಿ ಬಿಚ್ಚಿಟ್ಟಿರುವ ಚರಿತ್ರೆಗಳಿಗಿಂತಲೂ ಬಚ್ಚಿಟ್ಟಿರುವ ವಿವರಗಳೇ ಹೆಚ್ಚು ಎಂಬುದು ಸಾಮಾನ್ಯವಾದ ಅಭಿಪ್ರಾಯವಾಗಿದೆ. ಆದರೂ ಕಾದಂಬರಿಗೆ ಇರುವ ಅವಕಾಶಗಳನ್ನು ಬಳಸಿಕೊಂಡು ಅದರ ಓಟಕ್ಕೆ ಚ್ಯುತಿ ಬಾರದಂತೆ ಮತ್ತು ಉಳಿಸಿಕೊಳ್ಳಲೇಬೇಕಾದ ಅತೀ ಸೂಕ್ಷ್ಮ ವಿಚಾರಗಳನ್ನು ಒಬ್ಬ ಪ್ರಜ್ಞಾವಂತ ಲೇಖಕ ಮತ್ತು ಓದುಗ ಅದನ್ನು ಗ್ರಹಿಸುತ್ತಾನೆ. ಜೊತೆಗೆ ಕಾದಂಬರಿಕಾರರು ಚರಿತ್ರೆಯ ಕಟು–ಸತ್ಯಗಳನ್ನು ಮತ್ತು ಸರಳ ಸತ್ಯಗಳನ್ನೂ ಬಿಚ್ಚಿಡುವಲ್ಲಿ ಎಚ್ಚರಿಕೆ ವಹಿಸಬೇಕೆ ಅಥವಾ ಚರಿತ್ರೆಯನ್ನು ಇದ್ದ ಹಾಗೇ ಹೇಳಿಕೊಳ್ಳುವಲ್ಲಿ ತನಗಿರುವ ಸ್ವಾತಂತ್ರ್ಯವನ್ನು ನಿಗ್ರಹಿಸಿಕೊಳ್ಳಬೇಕೆ? ಎಂಬಂತಹ ಅಂಶಗಳ ದ್ವಂದ್ವಗಳನ್ನು ಬರಹಗಾರರು ಎದುರಿಸುವುದುಂಟು. ಅದನ್ನೇ **"**ಚರಿತ್ರೆಯನ್ನು ಮರೆತರೆ ಅದರ ದುರಂತಗಳನ್ನು ಮತ್ತೆ ಮತ್ತೆ ಎದುರಿಸಬೇಕಾಗುತ್ತದೆ. ಅಂದರೆ ಚರಿತ್ರೆಯ ಸತ್ಯಗಳನ್ನು ನಮ್ಮ ಅರಿವಿನ ಗೂಡಿನಲ್ಲಿ ಸಂಗ್ರಹಿಸಬೇಕು ಎಂದರ್ಥವಲ್ಲವೆ? ಹಾಗೆ ಸಂಗ್ರಹಿಸಬೇಕಿರುವುದು ಚರಿತ್ರೆಯಲ್ಲಿನ ಪೂರ್ಣ ಸತ್ಯಗಳನ್ನಷ್ಟೆ ಹೊರತು ನಮಗೆ ಬೇಕಾದ ಅರ್ಧ ಸತ್ಯಗಳನ್ನಲ್ಲ ಎಂದಲ್ಲವೆ? ಹೀಗಿರುವಾಗ ಚರಿತ್ರೆಯ ಸತ್ಯಗಳನ್ನು ಹೆಕ್ಕಿ ಹೊರತೆಗೆದಾಗ ಕೆಲವರು ಮೂಗು ಮುರಿಯುವುದೇಕೆ?**"** (ಡಾ.ಕೆ.ಎನ್.ಗಣೇಶಯ್ಯ) ಎಂಬ ಪ್ರಶ್ನೆಗಳು ಲೇಖಕರನ್ನು ಕಾಡುವುದುಂಟು.

ಭಾರತೀಯ ಪರಿಸರದಲ್ಲಿ ಘಟಿಸಿದ ಮತ್ತು ರಚಿತಗೊಂಡ ಚಾರಿತ್ರಿಕ ಸಂಗತಿಗಳು ಭಾರತೀಯರನ್ನು ಹಾಗೂ ಪಾಶ್ಚಿಮಾತ್ಯರನ್ನು ಅತ್ಯಂತ ಕುತೂಹಲಿಗಳಾಗುವಂತೆ ಮಾಡಿದ್ದಂತೂ ಸತ್ಯ. ಅದರಲ್ಲೂ ಭಾರತೀಯ ಇತಿಹಾಸದ ಬಹುಪಾಲು ವಿದೇಶಿ ಆಕ್ರಮಣವೇ ತುಂಬಿರುವುದು ಒಂದೆಡೆಯಾದರೆ; ಮತ್ತೊಂದೆಡೆ ಭಾರತೀಯರೇ ಪರಸ್ಪರ ಇಂತಹ ಆಕ್ರಮಣಗಳಿಗೆ ಮೂಲವಾಗಿದ್ದು.

ಇಂದಿಗೂ ಭಾರತೀಯ ಸಾಮಾಜಿಕ ವ್ಯವಸ್ಥೆಗೆ ಸಂಬಂಧಿಸಿದ ವಿಚಾರಗಳು, ಸಂಗತಿಗಳನ್ನು ಅನೇಕ ಸಂಶಯಗಳೊಂದಿಗೆ ಓದ ಬೇಕಾದ ಅನಿವಾರ್ಯತೆ ಇತಿಹಾಸಕಾರರ ಮುಂದಿದೆ. ಅದರಲ್ಲೂ ಮೂಲನಿವಾಸಿಗಳನ್ನು ಕುರಿತು ನಡೆದಿರುವ ಚರ್ಚೆಗಳಲ್ಲಿ ಪ್ರಮುಖವಾಗಿ ಇಂದಿಗೂ ಮುಖ್ಯವೆನಿಸುವ ಆರ್ಯ ಮತ್ತು ದ್ರಾವಿಡ ಪರಂಪರೆಗಳ ಕುರಿತ ಚರ್ಚೆಗಳು, ವಾದ–ವಿವಾದಗಳು ಭಿನ್ನ ಭಿನ್ನ ಸ್ವರೂಪಗಳನ್ನು ಪಡೆಯುತ್ತಲೇ ಇವೆ. ಅದನ್ನೇ "ಆರ್ಯರು ಹೊರಗಿನಿಂದ ಬಂದು ಸಿಂಧೂ ನದಿಯ ದಡದಲ್ಲಿ ನೆಲೆಸಿದ್ದರೆ? ಹಾಗಾದರೆ ದಕ್ಷಿಣ ಭಾರತದಲ್ಲಿ ನೆಲೆಗೊಂಡ ದ್ರಾವಿಡರು ಯಾರು? ಸಾವಿರಾರು ವರ್ಷಗಳ ಹಿಂದೆ ಸಾಕಷ್ಟು ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಿಂಧೂ ನಾಗರಿಕತೆ ಇದ್ದಕ್ಕಿದ್ದಂತೆ ಕೊನೆಗೊಂಡಿದ್ದೇಕೆ? ಆರ್ಯರು ಮತ್ತು ದ್ರಾವಿಡರಲ್ಲಿ ಸಾಮ್ಯತೆ ಇದೆಯೇ? ಇವರಿಬ್ಬರೂ ಒಂದೇ ಮೂಲದಿಂದ ಒಂದೇ ಮೂಲದಿಂದ ವಲಸೆ ಬಂದವರಿದ್ದಿರಬಹುದೆ?" (ಪ್ರಕಾಶ್ ಕಂಬತ್ತಳ್ಳಿ, 'ಶಿಲಾಕುಲ ವಲಸೆ' ಕೃತಿಯ ಬೆನ್ನುಡಿಯ ಭಾಗ) ಎಂಬಂತಹ ಪ್ರಶ್ನೆಗಳನ್ನು ಬೆನ್ನು ಹತ್ತುವ ಮೂಲಕ ಇದುವರೆಗಿನ ಇತಿಹಾಸದ ವಿಚಾರಗಳನ್ನು ಮರು ಪ್ರಶ್ನಿಸುವ, ಆ ಕುರಿತು ಓದುಗ ವಲಯವನ್ನು ಮರು ಚಿಂತನೆಗೆ ಹಚ್ಚುವ ಪ್ರಯತ್ನದಲ್ಲಿ ಕಾದಂಬರಿಯು ನಡೆಸುತ್ತಿರುವ ಹುಡುಕಾಟಗಳು ಇಲ್ಲಿ ಮುಖ್ಯವೆನಿಸುತ್ತವೆ. ಅದಲ್ಲದೆ ಆರ್ಯರ ಮೂಲವನ್ನು ಶೋಧಿಸುವ ಪ್ರಯತ್ನದಲ್ಲಿ "ಭಾರತವನ್ನು ಶಾಶ್ವತವಾಗಿ ತನ್ನ ಅಧೀನದಲ್ಲಿರಿಸಿಕೊಳ್ಳಬೇಕೆಂದು ಹೊರಗಿನ ಶಕ್ತಿಗಳು ಪ್ರಯತ್ನಿಸಿದ್ದರ ಕುರಿತೂ ಸಾಕಷ್ಟು ಮಾಹಿತಿ ಇದೆ" (ಅದೇ ಬೆನ್ನುಡಿಯ ಭಾಗ) ಎಂಬ ಅಂಶಗಳು ಇತಿಹಾಸವನ್ನು ಹೊಸ ರಾಜತಾಂತ್ರಿಕ ನೆಲೆಯಲ್ಲಿ ನೋಡಬೇಕಿರುವ ಅಂಶಗಳನ್ನು ವ್ಯಕ್ತಗೊಳಿಸುತ್ತದೆ.

ಇಷ್ಟು ಮಾತ್ರವಲ್ಲದೆ "ಎಡಕಲ್ಲುಗುಡ್ಡದ ಪುರಾತನ ಇತಿಹಾಸಕ್ಕೂ ಆರ್ಯರಿಗೂ ಇರುವ ಸಂಬಂಧವನ್ನು ಕುತೂಹಲ ಕೆರಳಿಸುವಂತೆ ವರ್ಣಿಸಿದ್ದಾರೆ. ಪುರಾಣ–ಇತಿಹಾಸ–ಚರಿತ್ರೆಗಳೆಲ್ಲವೂ ಇಲ್ಲಿ ಒಂದರೊಳಗೊಂದು ಮಿಳಿತವಾಗಿ ಹೊಸದೇ ಆಯಾಮವನ್ನು ಸೃಷ್ಟಿಸಿವೆ" (ಅದೇ ಬೆನ್ನುಡಿಯ ಭಾಗ) ಎಂಬ ವಿಚಾರಗಳು ಗಣೇಶಯ್ಯನವರು ಇತಿಹಾಸವನ್ನು ನೋಡುವ, ನಿರೂಪಿಸುವ ಮತ್ತು ಹೊಸ ಓದುಗ ವಲಯವನ್ನು ಸೃಷ್ಟಿಸುವ ಪ್ರಯತ್ನಗಳು, ಪ್ರಯೋಗಗಳು ಇಡೀ ಬರವಣಿಗೆಯಲ್ಲಿ ವ್ಯಕ್ತವಾಗಿವೆ. ಜೊತೆಗೆ ಚರಿತ್ರೆಯು ಬೆಳೆದಂತೆಲ್ಲಾ ಎಂದೆಂದಿಗೂ ಹಲವು ಮುಖಗಳನ್ನು ಹೊಂದಿರುವ ಕಾರಣ ಅದು ತನ್ನೊಳಗೆ ಅನೇಕ ಭಿನ್ನ ಅಭಿಪ್ರಾಯಗಳನ್ನು, ವೈರುಧ್ಯಗಳನ್ನು ಕಾಣಲು ಅನುವು ಮಾಡಿಕೊಡುತ್ತದೆ. ಹಾಗೆಯೇ ಚರಿತ್ರೆಯೊಂದಿಗೆ ಬೆಳೆಯುವ ಕಥೆಗಳಿಗೆ ಅಲ್ಲಿನ ಪಾತ್ರಗಳೂ ಸ್ಪಂದಿಸುವ ಕಾರಣ ಚರಿತ್ರೆಯಲ್ಲಿನ ಅಂಶಗಳಲ್ಲಿ ಸತ್ಯಾಂಶವಿರುವ ಬಗ್ಗೆ ಓದುಗ ವಲಯ ಕುತೂಹಲವಾಗುವ ಇಲ್ಲವೇ ಇಡೀ ಸಂಗತಿಗಳ ಭಾಗವಾಗುವ, ಸ್ವೀಕರಿಸುವ ಕ್ರಿಯೆ ನಡೆಯುತ್ತದೆ. ಈ ಕಾದಂಬರಿಯಲ್ಲಿನ ಗಮನಾರ್ಹ ಅಂಶಗಳು: ಕಾದಂಬರಿಯು ಪ್ರಾರಂಭವಾಗುವುದೇ ದೆಹಲಿ ಪ್ರದೇಶದ ಮೂಲಕ ಅದು 1947 ಜೂನ್ 22ರ ರಾತ್ರಿ 11:00 ಗಂಟೆ. ಬ್ರಿಟಿಷ್ ಅಧಿಕಾರಿ ಕಾರ್ಲೋಸ್ ಎಂಬುವ ಪಾತ್ರದೊಂದಿಗೆ. ಇಲ್ಲಿಂದ ಪ್ರಾರಂಭವಾಗುವ ಪತ್ತೆದಾರಿತನವು ಇಡೀ ಭಾರತೀಯ ಆಡಳಿತ, ರಾಜಕಾರಣ, ಧಾರ್ಮಿಕತೆ, ಆಕ್ರಮಣಗಳ ಪರಿಣಾಮಗಳು, ಅದನ್ನು ಪ್ರತಿರೋಧಿಸುವ ಭಾರತೀಯ ಮನಸ್ಸುಗಳು ಒಂದೆಡೆಯಾದರೆ; ಲಂಡನ್, ಲಂಡನ್‌ದ ಸರಕಾರಿ ಗೋದಾಮು, ಮೈಸೂರಿನ ಮಹಾರಾಜರ ಅರಮನೆಯೊಂದಿಗೆ ಹೆಣೆಯುವ ಪಾತ್ರಗಳು ನೀಡುವ ರೋಚಕ ಸಂಗತಿಗಳು ಮೊದಲ ಭಾಗದಲ್ಲಿಯೆ ಇಡೀ ಕಾದಂಬರಿಯು ಕರೆದುಕೊಂಡು ಹೋಗಬಹುದಾದ ದಿಕ್ಕಿನ ಪರಿಚಯವನ್ನು ಮಾಡುತ್ತದೆ.

ಬ್ರಿಟಿಷ್ ಆಡಳಿತವನ್ನು ವಿರೋಧಿಸುವ ಪ್ರಕ್ರಿಯೇ ಹೇಗೆಲ್ಲಾ ನಡೆಯಿತು. ಅದನ್ನು ವಿಫಲಗೊಳಿಸುವ ತಂತ್ರಗಳು ನಡೆಯುತ್ತಿರುವ ವಿಚಾರಗಳು ಮುಖ್ಯವೆನಿಸುತ್ತವೆ. ಅದರಲ್ಲೂ ನಾನಾಸಾಹೇಬ್‌ನು ಬ್ರಿಟಿಷ್‌ರಿಂದ ತಪ್ಪಿಸಿಕೊಂಡು ಗುಪ್ತವಾಗಿ ಜೀವನವನ್ನು ನಡೆಸುತ್ತಿದ್ದ ದಿನಗಳು, ಭಾರತ ಸ್ವಾತಂತ್ರ್ಯವಾಗುತ್ತದೆ ಎಂಬುದು ಗೊತ್ತಾದಾಗ ಇಲ್ಲಿನ ಸಂಪತ್ತನ್ನು ಗುಪ್ತವಾಗಿ ಸಾಗಿಸಲು ನಡೆದ ಸಂಗತಿಗಳು ಗಮನಸೆಳೆಯುತ್ತವೆ. ಹಾಗೆಯೇ ಭಾರತದವರು ಲೋಹಶಾಸ್ತ್ರದಲ್ಲಿ ಹೊಂದಿದ್ದ ಪರಿಣಿತಿಯನ್ನು ಬೆರಗುಗಣ್ಣಿನಿಂದ ನೋಡುತ್ತಿದ್ದ ಬ್ರಿಟಿಷ್ ಅಧಿಕಾರಿಗಳ ಮನೋಭಾವನೆಗಳು ಇಲ್ಲಿ ವ್ಯಕ್ತಗೊಂಡಿವೆ.

ಕಾದಂಬರಿಯ ಎರಡನೆಯ ಭಾಗವು ವೈನಾಡಿನ ಒಂದು ಬೆಟ್ಟ ಮತ್ತು ಬೆಟ್ಟದೊಳಗಿನ ಒಂದು ಗುಹೆಯೊಳಗಿನ ವ್ಯಕ್ತಿಯೊಂದಿಗೆ ಪ್ರಾರಂಭವಾಗುತ್ತದೆ. ಇಲ್ಲಿನ ದಾಳಿ ಪ್ರತಿದಾಳಿಗಳು, ಗೂಢಚಾರರ ದಾಳಿ, ಎ.ಎಸ್.ಐ ಕಛೇರಿಯ ಸನ್ನಿವೇಶ ಮತ್ತು ಅಲ್ಲಿನ ಇ–ಮೇಲ್‌ನ ಮಾಹಿತಿಯಲ್ಲಿನ ಶಿಲೆಯೊಂದಿಗಿನ ರಹಸ್ಯ ಮಾಹಿತಿಗಳು ಅತ್ಯಂತ ರೋಚಕವಾದ ಸಂಗತಿಗಳನ್ನು, ಗೂಢಚಾರಿಕೆಗಳನ್ನು, ಸರ್ಕೋಟಡ ಗುಜರಾತ್‌ದೊಂದಿಗೆ ಜೋಡಣೆ ಮತ್ತು ಕುದುರೆ, ಒಂಟೆ, ಆನೆ, ಸಿಂಹ ಮುಂತಾದ ಎಂಟು ಪ್ರಾಣಿಗಳ ಅವಶೇಷಗಳನ್ನು ಹುಡುಕುವುದು. ಹೋಟೆಲ್ ವೆಸ್ಟ್‌ಎಂಡ್ ಬೆಂಗಳೂರು, ಹೋಟೆಲ್ ಉಡ್‌ಲ್ಯಾಂಡ್ ಚೆನ್ನೈ, ಶೂದ್ರನೊಬ್ಬನ ಕನವರಿಕೆ, ಬೆಂಗಳೂರು ಪುಂಗವೀ ಪೂಜಾ ಮನೆ, ಸೋಲಿಗರು ಪೂಜಿಸುವ ಸಂಪಿಗೆಮರ, ದೈವಶಕ್ತಿಗಳ ಉಗಮ, ಮಾನವನ ಜೀವನಕ್ರಮದ ಅನುಭವದಿಂದ ಜನ್ಮತಾಳಿದ ಕಲ್ಪನೆ, ಆ ಜೀವನ ಕ್ರಮಗಳು ಬದಲಾದಂತೆ ಆ ದೈವಶಕ್ತಿಗಳು ಬದಲಾಗುವ ಸಂದರ್ಭಗಳು ಮತ್ತು ಪಲ್ಲಟಗಳನ್ನು ಅತ್ಯಂತ ವಿಭಿನ್ನವಾಗಿ ಚರ್ಚಿಸಲಾಗಿದೆ. ಈ ಕಾದಂಬರಿಯಲ್ಲಿನ ಮತ್ತೊಂದು ವಿಶೇಷತೆ ಅದು ಪಡೆದುಕೊಳ್ಳುತ್ತಿರುವ ರೋಚಕವಾದ ತಿರುವುಗಳು, ಭುಜ್‌ನ ಪ್ರಿನ್ಸ್ ಹೋಟೆಲ್‌ನಲ್ಲಿನ ಅನುಮಾನಗಳು, ಬೆಂಗಳೂರಿನ ಐ.ಜಿ.ಪಿ ಕಛೇರಿ, ಪೋಲಿಸ್ ಸ್ಟೇಷನ್, ಇದರೊಂದಿಗೆ ಯುರೋಪಿನೊಂದಿಗೆ ಭಾಷಿಕ ನಂಟುಗಳನ್ನು ಬೆಳೆಸುವ ಕ್ರಮ ಅದರಲ್ಲೂ ಗ್ರೀಕ್, ಲ್ಯಾಟಿನ್ ಮತ್ತು ಭಾರತೀಯ ಭಾಷೆ ಸಂಸ್ಕೃತ ಇವುಗಳೆಲ್ಲವುಗಳು ಜನ್ಮ ತಳೆದ ಬಗೆಗಳನ್ನು ಕಟ್ಟಿಕೊಡುವ ಸಂದರ್ಭದಲ್ಲಿ ಸರ್ ವಿಲಿಯಮ್ ಜೋನ್ಸ್ ಅವರ ವಿಚಾರಗಳು ಕಾದಂಬರಿಯ ವಿಶೇಷತೆಗೆ ಸಾಕ್ಷಿಯಾಗುತ್ತದೆ.

ಇಲ್ಲಿ ಆರ್ಯರ ಆಗಮನದ ಕುರಿತಾದ ವಿಚಾರವಾಗಿ ನಡೆಯುವ ಚರ್ಚೆಗಳು, ಜರ್ಮನಿಯ ಸಂಸ್ಕೃತ ತಜ್ಞ ಮ್ಯಾಕ್ಸ್‌ಮುಲ್ಲರ್‌ನ ಪ್ರತಿಪಾದನೆ, ನಾಗರಿಕತೆಯ ವಿಕಾಸದ ಕುರಿತಾಗಿ ನಡೆಯುವ ಚರ್ಚೆಗಳು, ಪ್ರಮುಖವಾಗಿ ಹಿಟ್ಲರ್ ಹಾಗೂ ಆತನ ಅನುಯಾಯಿಗಳು ತಮ್ಮನ್ನು ತಾವು ಸರ್ವೋತ್ತಮ ಆರ್ಯಕುಲದವರೆಂದು ನಂಬಿದ್ದ ವಿಚಾರಗಳು, ಅದರೊಂದಿಗೆ ಹಿಟ್ಲರ್ ತನ್ನ ಆಡಳಿತಕ್ಕೆ ವೇದಕಾಲದ ಸ್ವಸ್ತಿಕ್ ಚಿಹ್ನೆಯನ್ನು ಉಪಯೋಗಿಸುತ್ತಿದ್ದ ಅಂಶಗಳು ಮತ್ತು ಹೆನ್ರಿಕ್ ಹಿಮ್ಲರ್ ತನ್ನ ಜೊತೆಯಲ್ಲಿ ಯಾವಾಗಲೂ ಭಗವದ್ಗೀತೆಯ ಒಂದು ಪ್ರತಿಯನ್ನು ಹೊತ್ತು ತಿರುಗುತ್ತಿದ್ದ ಎಂಬಂತಹ ವಿಚಾರಗಳು ಇಲ್ಲಿ ಚರ್ಚಾರ್ಹವೆನಿಸುತ್ತವೆ. ಇಲ್ಲಿನ ಪ್ರಮುಖ ಪಾತ್ರಗಳಾದ ಪೂಜಾ, ಚಂಗಪ್ಪ ಇವರುಗಳ ಮೂಲಕ ನಡೆಯುವ ಕಾದಂಬರಿಯ ಚಲನಶೀಲತೆಯು ತನ್ನೊಳಗೆ ಅನೇಕ ವೈಚಾರಿಕ ಮತ್ತು ವೈಜ್ಞಾನಿಕ ವಿಚಾರಗಳೊಂದಿಗೆ ಚರ್ಚೆಗೆ ಅವಕಾಶವನ್ನು ಕಲ್ಪಿಸುತ್ತದೆ.

ಅದರಲ್ಲೂ "ವಿಜ್ಞಾನಿಗಳ ವೈಯಕ್ತಿಕ ಅಭಿಪ್ರಾಯಗಳು ತಮ್ಮ ಪುರಾವೆ ಮತ್ತು ತೀರ್ಮಾನಗಳನ್ನು ಹೇಗೆ ತಿರುಚುತ್ತವೆ ಎನ್ನುವುದು ಈ ವಿಷಯದ ಬಗ್ಗೆ ಪಾಶ್ಚಾತ್ಯರು ತೋರಿದ ವಿಚಿತ್ರ ಅವಲೋಕನದಿಂದ ವಿಶದವಾಗುತ್ತದೆ." (ಶಿಲಾಕುಲ ವಲಸೆ ಪು.ಸಂ–130) ಎಂಬ ವಿಚಾರಗಳು ಒಂದು ವಲಸೆಯೊಂದಿಗೆ ಸೇರಿಕೊಳ್ಳುವ ಹುನ್ನಾರಗಳನ್ನು ವ್ಯಕ್ತಗೊಳಿಸುತ್ತದೆ. ಇದರೊಂದಿಗೆ ಒಂದು ಆಕ್ರಮಣವಾಗಲಿ, ದಾಳಿಯಾಗಲಿ ಅದು ಕೇವಲ ಪ್ರಾದೇಶಿಕ ವಿಸ್ತಾರ ಮಾತ್ರವಾಗಿರದೆ ಅದು ಆ ಸಂದರ್ಭದ ಅನಿವಾರ್ಯತೆಗಳಾದ ಧರ್ಮ ಮತ್ತು ರಾಜಕಾರಣದ ವಿಸ್ತಾರವೂ ಆಗಿರುತ್ತದೆ. ಮಾತ್ರವಲ್ಲದೆ ಅಲ್ಲಿನ ಭಾಷೆ, ಸಂಸ್ಕೃತಿ, ವಿಜ್ಞಾನ ಅವಿಸ್ಕಾರಗಳನ್ನು, ಇಡೀ ಜೀವನ ಕ್ರಮವನ್ನು ಆಪೋಷನಗೊಳಿಸುವ ತಂತ್ರಗಳನ್ನು ಹೊತ್ತು ತಂದಿರುತ್ತದೆಂಬುದು ಕಾದಂಬರಿಯ ಉದ್ದಕ್ಕೂ ವ್ಯಕ್ತವಾಗಿದೆ.

ಹೀಗೆ ಒಂದು ಐತಿಹಾಸಿಕ ಕಾದಂಬರಿಯು ತನ್ನೊಳಗೆ ಕೇವಲ ಒಂದು ಕಥೆಯನ್ನು ಮಾತ್ರ ಕಟ್ಟಿಕೊಳ್ಳದೇ ಅದರೊಂದಿಗೆ ಸತ್ಯ ಘಟನೆಗಳನ್ನು ಹೊತ್ತು ತರುತ್ತದೆ. ಆದರೂ ಅದು ತನ್ನ ತೀರ್ಮಾನವನ್ನು ಓದುಗ ವಲಯಕ್ಕೆ ಬಿಡುತ್ತದೆ. ಆದಾಗ್ಯೂ ಐತಿಹಾಸಿಕ ಕಾದಂಬರಿಯು ಪ್ರಮುಖವಾಗಿ ನಾವು ಯಾರು? ಮಾನವ ದೈವ ಸೃಷ್ಟಿಯೇ? ಅಥವಾ ದೇವರು ಎನ್ನುವ ಪರಿಕಲ್ಪನೆ ಕೇವಲ ಮನುಷ್ಯರ ಸೃಷ್ಟಿಯೇ? ಇಡೀ ಪ್ರಪಂಚದಲ್ಲಿ ಎಲ್ಲಾ ಕೋಮಿನ ಜನರಲ್ಲಿ ದೇವರ ಪರಿಕಲ್ಪನೆ ಸೃಷ್ಟಿಯಾಗಲು ಹೇಗೆ ಸಾಧ್ಯವಾಯಿತು? ಒಂದು ವೇಳೆ ದೇವರು ಮನುಷ್ಯರ ಕಲ್ಪನೆಯಾಗಿದ್ದರೆ ಮನುಷ್ಯ ತನ್ನ ಕಲ್ಪನೆಯ ಭೀತಿಯಲ್ಲೇ ಏಕೆ ಬಂಧಿಯಾಗಿದ್ದಾನೆ? ಎಂಬಂತಹ ಹಲವಾರು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಅದನ್ನು ಕಾದಂಬರಿಯು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ.

**ಪರಾಮರ್ಶನ ಗ್ರಂಥಗಳು**

ಗಣೇಶಯ್ಯ. ಕೆ.ಎನ್. (2014). ಶಿಲಾಕುಲವಲಸೆ, ಅಂಕಿತ ಪುಸ್ತಕ. ಬೆಂಗಳೂರು.